ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.2659/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಸಲೀಮಾ ಬೇಗಂ** | | |
| **ತಂದೆಃಹೆಸರು** | **ಅಬ್ದುಲ್ ಸಮದ್** | **ಪಿಡಬ್ಲೂಃ** | **1** |
| **ವಯಸ್ಸು** | **46 ವರ್ಷ** | **ಸಿಡಬ್ಲೂಃ** | **1** |
| **ಉದ್ಯೋಗಃ** | **ಬಟ್ಟೆ ವ್ಯಾಪಾರ** | | |
| **ವಾಸ ಸ್ಥಳಃ** | **ಸಿಂಧನೂರು.** | | |

**ದಿನಾಂಕ 23-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 2 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಕನ್ನಡ ಭಾಷೆ ಅಷ್ಟೋಂದು ಬರುವದಿಲ್ಲ, ಹಿಂದಿ ಭಾಷೆ ಬರುತ್ತದೆ ಎಂದು ತಿಳಿಸಿದ್ದರಿಂದ ಶ್ರೀ. ಹೆಚ್. ಕೆ. ಜಿ. ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಿ, ಅವರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.**

ಚಾಸಾ-2 ರಿಂದ 7 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಸಿಂಧನೂರಿನ ಆದಿಶೇಷ ಗುಡಿಯ ಹತ್ತಿರ ನನ್ನ ಬಟ್ಟೆ ಅಂಗಡಿ ಇತ್ತು. ನಮ್ಮ ಅಂಗಡಿಯ ಮುಂದೆ 1 ನೇ ಆರೋಪಿಯ ಅಂಗಡಿ ಇದೆ. ನಮ್ಮ ಗ್ರಾಹಕರು ವಾಹನ ನಿಲ್ಲಿಸಿದಾಗ ಆರೋಪಿತರು ತುಂಬಾ ತೊಂದರೆ ಕೊಡುತ್ತಿದ್ದರು. ಆ ಬಗ್ಗೆ ಬಹಳ ಸರಿ ನಾನು ಸಮಾಧಾನ ಮಾಡಿದರೂ ಸಹ ಅವರು ಸಮಾಧಾನ ಆಗಲಿಲ್ಲ.

ದಿ.01-05-2024 ರಂದು ಸಂ.4-5 ಗಂಟೆಗೆ ನಮ್ಮ ಅಂಗಡಿಗೆ ಗ್ರಾಹಕರು ಬಂದಿದ್ದು, ಆ ಗಿರಾಕಿಗೆ 1 ನೇ ಆರೋಪಿ ಸಿಟ್ಟಿನಿಂದ ಮಾತನಾಡಿದರು, ಆ ಗಿರಾಕಿಯ ಹೆಸರು ನನಗೆ ಗೊತ್ತಿಲ್ಲ. ಆಗ ನಾನು 1ನೇ ಆರೋಪಿಗೆ ನೀವು ಈ ರೀತಿ ಮಾತನಾಡಿದರೆ ನನ್ನ ಗಿರಾಕಿ ಹಾಳಾಗುತ್ತದೆ, ಆ ರೀತಿ ಮಾತನಾಡಬೇಡಿ ಎಂದು ಹೇಳಿದೆ, ಆಗ 1 ನೇ ಆರೋಪಿ ನನ್ನನ್ನು ಸಿಟ್ಟಿನಿಂದ ನೋಡಿದನು.

ಅದೇ ದಿನ ರಾ.8 ಗಂಟೆಗೆ ನಾನು ಅಂಗಡಿ ಬಂದ್ ಮಾಡಿಕೊಂಡು, ನಾನು, ಚಾಸಾ-2 & 3 ರವರು ಮನೆಗೆ ಹೊರಟಿದ್ದೆವು. ಆಗ ಸಂಗೊಳ್ಳಿ ರಾಯಣ್ಣ ಸರ್ಕಲ್ ಹತ್ತಿರ ನಾವು ಹೋಗುತ್ತಿದ್ದಾಗ, ಸೈಯದ್ ವಾಹಿದ್ ಪಾಷಾ, ಸೈಯದ್ ರಬ್ಬಾನಿ, ಸೈಯದ್ ಮುನೀರ್ ಪಾಷಾ, ಎಂ ಡಿ ಪಾಷಾ ರವರು ಬಂದು ನಮ್ಮನ್ನು ಅಡ್ಡಗಟ್ಟಿ ನಿಲ್ಲಿಸಿದರು. ಆಗ 1 ನೇ ಆರೋಪಿ ನನಗೆ ನಿಮ್ಮ ಗ್ರಾಹಕರ ಮುಂದೆ ನನ್ನ ಮರ್ಯಾದೆ ಹಾಳು ಮಾಡುತ್ತೀಯಾ ಎಂದು ಅವಾಚ್ಯವಾಗಿ ಬೈದ. ಆಗ ನಾನು ಆತನಿಗೆ ಆ ರೀತಿ ಮಾತನಾಡಬೇಡ, ನಾಲಿಗೆ ಹಿಡಿದು ಮಾತನಾಡು ಎಂದು ಹೇಳಿದೆ. ಆಗ 1ನೇ ಆರೋಪಿ ನನಗೆ ಚಪ್ಪಲಿ ತೆಗೆದುಕೊಂಡು ಹೊಡೆದನು. 2ನೇ ಆರೋಪಿ ನನ್ನ ಜಡೆ ಹಿಡಿದು & ಬುರ್ಕಾ ಹಿಡಿದು ಎಳೆದಾಡಿದರು, ಆಗ ನನ್ನ ಬುರ್ಕಾ ಹರಿದು ಹೋಗಿತ್ತು. ಆಗ ಚಾಸಾ-2 & 3 ರವರು ಬಿಡಿಸಲು ಬಂದಾಗ ಎಲ್ಲಾ ಆರೋಪಿತರು ಸೇರಿ ಚಾಸಾ-2 & 3 ರವರಿಗೆ ಹೊಡೆಬಡೆ ಮಾಡಿದರು. ಆಗ ಜಗಳ ಬಿಡಿಸಲು ಚಾಸಾ-6 & 7 ರವರು ಬಂದಿರುತ್ತಾರೆ. 4 ಜನ ಸೇರಿ ಚಾಸಾ-2 ರವರಿಗೆ ಒದ್ದಿರುತ್ತಾರೆ. ಚಾಸಾ-3 ರವರನ್ನು ಕೆಳಗೆ ಬೀಳಿಸಿ, ತಲೆಗೆ & ಹೊಟ್ಟೆಗೆ ಒದ್ದಿರುತ್ತಾರೆ. ಆತನಿಗೆ ನಡುವಿನ ಭಾಗದಲ್ಲಿ ಗಾಯಗಳಾಗಿರುತ್ತವೆ. ನಂತರ ಆರೋಪಿತರು ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಜೀವದ ಬೆದರಿಕೆ ಹಾಕಿದ್ದರು.

ನಂತರ ನಾವು ಆದರ್ಶ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೆವು. ಪೋಲೀಸರು ರಾ.1 ರಿಂದ 2 ಗಂಟೆಯವರೆಗೆ ನನ್ನ ಹೇಳಿಕೆ ಪಡೆದುಕೊಂಡರು. ನಂತರ ನಾವು ಹೆದರಿಸಿಕೊಂಡು ಗದಗದಲ್ಲಿರುವ ನಮ್ಮ ಸಂಬಂಧಿಕರ ಮನೆಗೆ ಹೋದೆವು.

ದಿ.14-05-2024 ರಂದು ಮ.4 ರಿಂದ 4-30 ರವರೆಗೆ ಪೋಲೀಸರು ಸ್ಥಳ ಪಂಚನಾಮೆಯನ್ನು ಮಾಡಿದ್ದರು. ಸಾಕ್ಷಿಯು ದೂರನ್ನು & ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಮಾನ್ಯ ಸ.ಸ.ಅ. ರವರು ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.